# ಅಧ್ಯಾಯ – ೧೦
# ಸಾಹಿತ್ಯ ಮತ್ತು ಸಂಸ್ಕೃತಿ

**ಶಾಸನ ಕವಿಗಳು :** ತಾಲೂಕಿನ ಶಾಸನಗಳಲ್ಲಿ ಅಪರೂಪಕ್ಕೊಮ್ಮೆ ಶಾಸನ ರಚಿಸಿದ ಕವಿ, ಇಲ್ಲವೇ ಶಾಸನ ಬರೆದ ಲಿಪಿಕಾರ ಶಿಲ್ಪ–ಕೊರೆದ ಶಿಲ್ಪಿಯ ಹೆಸರು ಲಭಿಸುತ್ತದೆ. ಗಂಗ ಶ್ರೀಪುರಷನ ಸರಗೂರು ತಾಮ್ರ ಶಾಸನವನ್ನು ರಚಿಸಿದವನು ಕೊಂಡಾಚಾರ್ಯನೆಂದು ತಿಳಿದುಬರುತ್ತದೆ. ಬಪ್ಪನಹಳ್ಳಿಯ ೧೦೫೩ರ ದೇಕಬ್ಬೆಯ ಶಾಸನವನ್ನು ಬರೆದವನು ಕುರುಪಿನ ಆದಿತ್ಯನೆಂದೇ ಪ್ರಸಿದ್ಧನಾಗಿದ್ದು ಕವಿರಾಜಬಾಂಧವ ಎಂಬ ಬಿರುದನ್ನು ಹೊಂದಿದ್ದ ಮಲ್ಲನಾಗಿದ್ದು, ಇದನ್ನು ಖಂಡರಿಸಿದವರು ಅನಿವರ ಸಿಂಗಾಚಾರಿ ಹಾಗೂ ಮಚರಿಪರಗಂಡಾಚಾರಿ ಎಂದು ತಿಳಿದುಬರುತ್ತದೆ. ಬೆಳತೂರಿನ ೧೨೫೫ರ ಶಾಸನದಲ್ಲಿ ಲಿಪಿಕಾರ ಅಸದನನ್ನು ಹೆಸರಿಸಲಾಗಿದ್ದು, ಶಾಸನ ಕಲ್ಲನ್ನು ಕೆತ್ತಿದವನು ಮಸಣೋಜನೆಂದು ಹೇಳಲಾಗಿದೆ. ೧೩೨೭ರ ಶಾಸನದಲ್ಲಿ ಸಿರಿಪತಿಯ ಮಗ ಪೊನ್ನಯ್ಯನು ಲಿಪಿಕಾರನಾಗಿ ಕಾಣಿಸಿಕೊಂಡಿದ್ದಾನೆ. ಸರಗೂರಿನ ೧೪೯೩ರ ತಾಮ್ರ ಶಾಸನವನ್ನು ಬರೆದವನು ತಿಪ್ಪಯಾಚಾರ್ಯನೆಂದು ಗೊತ್ತಾಗುತ್ತದೆ. ಮಳ್ಳೂರಿನ ೧೬೨೫ರ ಶಾಸನದಲ್ಲಿ ಸೇನಭೋವ ದೇವಣ್ಣನು ಶಿಲ್ಪಶಾಸ್ತ್ರ ಪ್ರವೀಣನಿದ್ದನೆಂದು ದಾಖಲಿಸಲಾಗಿದೆ.

ಮೈಸೂರಿನ ಚಾಮುಂಡೇಶ್ವರಿ, ಮುಡುಕತೊರೆಯ ಮಲ್ಲಿಕಾರ್ಜುನ, ಮಲೆಮಹದೇಶ್ವರ, ಗದ್ದಿಗೆಯ ಕೆಂಡಗಣ್ಣಸ್ವಾಮಿ, ಬೊಪ್ಪಗೌಡನಪುರದ ಮಂಟೆಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಮೊದಲಾದ ದೇವತೆ ಹಾಗೂ ಧರ್ಮಸುಧಾರಕರುಗಳಿಗೆ ಸಂಬಂಧಿಸಿದ ಜಾನಪದ, ಸಾಹಿತ್ಯ ಹಾಗೂ ಕಲೆ ಮೈಸೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಇದೆ. ವೃತ್ತಿಗಾಯಕರಾದ ದೇವರ ಗುಡ್ಡರು ಮತ್ತು ನೀಲಗಾರರ ಜೊತೆಗೆ ಹೆಳವರು, ಗೊರವರು, ತೆಲುಗು ಜಂಗಮರು ಸಹ ತಾಲೂಕಿನಲ್ಲಿ ಕಂಡುಬರುತ್ತಾರೆ.

**ಜಾನಪದ ಕಲೆ ಮತ್ತು ಸಾಹಿತ್ಯ :** ಹೆಗ್ಗಡದೇವನಕೋಟೆ ತಾಲೂಕಿನ ಬೆಳ್ತೂರಿನಲ್ಲಿ ಕೋಡಂಗಿಕುಣಿತದ ಕಲಾವಿದರು ಕಂಡುಬರುತ್ತಾರೆ. ಬಳೆಕುಣಿತ, ತಮಟೆಕುಣಿತ ತಾಲೂಕಿನ ವಿವಿಧ ಭಾಗಗಳಲ್ಲಿ ಇರುವುದನ್ನು ಇತ್ತೀಚೆಗೆ ಗುರ್ತಿಸಲಾಗಿದೆ. ಮಗ್ಗೆಯಲ್ಲಿ ಬಿಲ್ಲಾಟದ

ಕಲಾವಿದರಿದ್ದಾರೆ. ಅಲ್ಲದೆ ತಾಲೂಕಿನ ಕೋಳಗಾಲದಲ್ಲಿ ಘಟ್ಟದಕೋರೆ ಯಕ್ಷಗಾನದ ಕಲಾವಿದರು ಇದ್ದಾರೆ. ಜಯಚಂದ್ರರಾಜ ಅರಸುರವರು 'ಘಟ್ಟದಕೋರೆ ಯಕ್ಷಗಾನ ಮತ್ತು ಕೋಳಗಾಲ' ಎಂಬ ಗ್ರಂಥದಲ್ಲಿ ಕೋಳಗಾಲದ ಯಕ್ಷಗಾನ ಹಾಗೂ ಅಲ್ಲಿನ ಕಲಾವಿದರ ಬಗ್ಗೆ ವಿಸ್ತಾರವಾಗಿ ಬರೆದಿದ್ದಾರೆ.

ಜನಪದ ಕ್ಷೇತ್ರಕಾರ್ಯವನ್ನು ಮಾಡಿ ಕೃತಿಯನ್ನು ಪ್ರಕಟಿಸಿರುವವರಲ್ಲಿ ತಾಲೂಕಿನ ಸರಗೂರು ಸ.ಚ. ಮಹದೇವನಾಯಕ ಪ್ರಮುಖರು. ಹಳ್ಳಿಯ ಹಾಡುಗಳು, ಸಂಪಿಗೆ ಅರಳೀವೆ, ಜನಪದ ರಸಗಂಗೆ ಮತ್ತು ನಾನೆದ್ದು ನೆನೆದೇನು, ಇವು ಅವರು ನಂಜನಗೂಡು ಮತ್ತು ಹೆಚ್.ಡಿ. ಕೋಟೆ ತಾಲೂಕಿನಲ್ಲಿ ಸಂಗ್ರಹಿಸಿ ಪ್ರಕಟಸಿರುವ ಜನಪದ ಕೃತಿಗಳು. ತಾಲೂಕಿನ ಕಣಿಯನಹುಂಡಿ ಗ್ರಾಮದ ನೀ. ಗಿರಿಗೌಡ ಎರಡು ಜನಪದಕಾವ್ಯಗಳನ್ನು ಪ್ರಕಟಿಸಿದ್ದಾರೆ. ಹೆಗ್ಗಡದೇವನಕೋಟೆಯ ಮಹದೇವಪ್ಪ ಸೋಬಾನೆ, ರತ್ನಾವಳಿ, ನವರತ್ನ ಪಾರಿಜಾತ, ಜನಪದ ಗೀತೆಗಳು, ಮಲೆಯ ಮಹದೇಶ್ವರ ಸ್ವಾಮಿ ಚರಿತ್ರೆಗಳನ್ನು ಪ್ರಕಟಿಸಿದ್ದಾರೆ. ಹೆಗ್ಗಡದೇವನಕೋಟೆಯ ಬಿ.ಎಸ್. ರಾಜಶೇಖರಾಚಾರ್ 'ನಮ್ಮೂರು ಬನ್ನೂರು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಯಕ್ಷಗಾನದ ಜೊತೆಗೆ ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಸೂತ್ರದ ಗೊಂಬೆಯಾಟದ ಕಲಾವಿದರಿದ್ದಾರೆ.

**ಸಂಗೀತ :** ಮೈಸೂರು ಅರಸರು ಸಂಗೀತ ಮತ್ತು ನೃತ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದೇ, ಅಲ್ಲದೆ ಸ್ವತಃ ಸಂಗೀತರಾಗಿದ್ದರು. ಕಂಠೀರವ ನರಸರಾಜ ಒಡೆಯರ ಆಸ್ಥಾನದಲ್ಲಿ ಪ್ರಸಿದ್ಧರಾದ ಅನೇಕ ವೀಣಾವಾದಕರಿದ್ದರು. ಅವರಲ್ಲಿ ವೀಣೆ ಕೃಷ್ಣಯ್ಯ ಪ್ರಮುಖರಾದವರು. ಚಾಮರಾಜ ಒಡೆಯರು ಸಂಗೀತಗಾರರು, ಚಿಕ್ಕ ದೇವರಾಯರು ಗೀತ ಗೋಪಾಲ ಕೃತಿಯ ಲೇಖಕರೂ ಆಗಿದ್ದರು. ಮುಮ್ಮಡಿ ಕೃಷ್ಣರಾಜರು ಬರೆದಿರುವ "ಶ್ರೀ ತತ್ವನಿಧಿ" ಕೃತಿಯು ಸುಂದರವಾದ ವರ್ಣಚಿತ್ರಗಳನ್ನು ಒಳಗೊಂಡು ಸ್ವರ, ರಾಗ ಮತ್ತು ತಾಳಗಳಿಂದ ಕೂಡಿರುವ ಮಹತ್ವದ ಸಂಗೀತ ಗ್ರಂಥವಾಗಿದೆ. ಭಕ್ಷಿ ವೆಂಕಟಸುಬ್ಬಯ್ಯ, ಸಾಂಬಯ್ಯ, ಬಂಗಾರು ಸಾಮಯ್ಯ ಮೊದಲಾದವರು ಇತರ ಪ್ರಸಿದ್ಧ ವೀಣಾವಾದಕರು ಎನಿಸಿದ್ದಾರೆ. ಮೂರನೇ ಕೃಷ್ಣರಾಜರು, ಭಕ್ಷಿ ವೆಂಕಟಸುಬ್ಬಯ್ಯನವರ ಸಂಗೀತ ಪ್ರತಿಭೆಯನ್ನು ಗುರುತಿಸಿ ಕೊಡುಗೆಯಾಗಿ ಚಿನ್ನದ ವೀಣೆಯ ಜೊತೆಗೆ ಹೆಗ್ಗಡದೇವನಕೋಟೆ ತಾಲೂಕಿನ ಶಂಕಹಳ್ಳಿಯನ್ನು ದಾನವಾಗಿ ಕೊಟ್ಟಿದ್ದಕ್ಕೆ ಶಾಸನಾಧಾರವಿದೆ.

**ಜಾನಪದ ಗಾಯನ :** ಸಾಮಾನ್ಯ ಜನರು ಮನರಂಜನೆಗಾಗಿ ಅನೇಕ ಕಲೆಗಳನ್ನು ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಅವುಗಳನ್ನು ಹಬ್ಬ ಹರಿದಿನಗಳಲ್ಲಿ, ಶುಭಕಾರ್ಯಗಳಲ್ಲಿ, ಬಿಡುವಿನ ವೇಳೆಯಲ್ಲಿ ಪ್ರದರ್ಶಿಸುತ್ತಿದ್ದುದು ರೂಢಿಯಲ್ಲಿತ್ತು. ಜನಪದ ಗೀತೆಗಳನ್ನು ಹಾಡುವುದು, ಜನಪದ ಕತೆಗಳನ್ನು ಹೇಳುವುದು ಸಾಮಾನ್ಯ. ಬೀಸುವಾಗ, ಕುಟ್ಟುವಾಗ, ನಾಟಿಹಾಕುವಾಗ ಜನಪದ ಗೀತೆಗಳನ್ನು ಹಾಡುವುದರ ಮೂಲಕ ತಮ್ಮ ಕೆಲಸ ಕಾರ್ಯಗಳನ್ನು ಹಗುರ ಮಾಡಿಕೊಳ್ಳುತ್ತಿದ್ದುದು ಕಂಡು ಬರುತ್ತದೆ. ಕೋಲಾಟ,

ಮಾರಿಕುಣಿತ, ಡೊಳ್ಳುಕುಣಿತ, ಕೋಡಂಗಿ ಕುಣಿತ, ಬಳೆ ಕುಣಿತ, ರಂಗದ ಕುಣಿತ, ಯಕ್ಷಗಾನ, ಪೌರಾಣಿಕ ನಾಟಕಗಳು ಮುಂತಾದ ಕಲೆಗಳು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸಿದ್ಧವಾದುವು.

**ಬುಡಕಟ್ಟು ಕಲೆ :** ಜನಪದ ಕಲಾವಿದರು, ರಂಗಭೂಮಿ ಕಲಾವಿದರು ಈ ತಾಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಹಾಡಿಗಳಲ್ಲಿ ವಾಸಿಸುವ ಜೇನುಕುರುಬರು, ಬೆಟ್ಟಕುರುಬರು, ಫಣಿಯರು, ಎರವರೇ ಮೊದಲಾದವರು ತಮ್ಮಲ್ಲಿರುವ ಅನೇಕ ಬುಡಕಟ್ಟು ಕಲೆಗಳನ್ನು ಜೀವಂತವಾಗಿರಿಸಿಕೊಂಡು ಸೂಕ್ತ ಸಂದರ್ಭಗಳಲ್ಲಿ ಅದ್ಭುತವಾಗಿ ಪ್ರದರ್ಶಿಸುತ್ತಾರೆ. ತಾಲೂಕಿನ ಬೆಳತೂರಿನಲ್ಲಿ ಬಳೆ ಕುಣಿತ ಹಾಗೂ ಮಗ್ಗೆ ಗ್ರಾಮದಲ್ಲಿ ಕಂಡು ಬರುವ ಬಿಲ್ಲಾಟ ತುಂಬಾ ಪ್ರಸಿದ್ಧವಾದವು.

**ತಾಲೂಕಿನ ಪ್ರಮುಖ ಸಾಹಿತಿಗಳು :** ಈ ತಾಲೂಕಿನ ದೇಕಬ್ಬೆ ಶಾಸನವನ್ನು ಬರೆದಿರುವ ಮಲ್ಲನೇ ತಾಲೂಕಿನ ಅತ್ಯಂತ ಪ್ರಾಚೀನ ಕವಿ. ಪತ್ರಿಕಾಭೀಷ್ಮ ತಾತಯ್ಯ ಎಂದೇ ಪ್ರಸಿದ್ಧರಾಗಿದ್ದ ಎಂ. ವೆಂಕಟಕೃಷ್ಣಯ್ಯ ತಾಲೂಕಿನ ಇನ್ನೊಬ್ಬ ಪ್ರಸಿದ್ಧ ಲೇಖಕರು ಮತ್ತು ಪತ್ರಕರ್ತರು. ಕಾನೂನುಲೇಖಕ ವಿ.ಎಚ್. ಗೌಡ ಹೊಸಹೊಳಲಿನವರು. ಹಳಗನ್ನಡ ವಿದ್ವಾಂಸ ಪ. ನಾಗರಾಜಯ್ಯ ಕಿತ್ತೂರಿನವರು. ಪ್ರಸಿದ್ಧ ಲೇಖಕರಾದ ಶ್ರೀ ಕೃಷ್ಣಆಲನಹಳ್ಳಿ, ಸ.ಚ. ಮಹದೇವನಾಯಕ, ನೀ. ಗಿರಿಗೌಡ, ಕ್ಯಾತನಹಳ್ಳಿ ಬಸವರಾಜು ಮುಂತಾದವರು ಇದೇ ತಾಲೂಕಿನವರು.

**ಎಂ. ವೆಂಕಟಕೃಷ್ಣಯ್ಯ (೧೮೪೪–೧೯೩೩) :** ಎಂ. ವೆಂಕಟಕೃಷ್ಣಯ್ಯ ತಾಲೂಕಿನ ಮಗ್ಗೆ ಗ್ರಾಮದವರು. ಈ ಗ್ರಾಮ ಕಬಿನಿ ಹಿನ್ನೀರಿನಿಂದ ಮುಳುಗಡೆಯಾದ್ದರಿಂದ ಸ್ಥಳಾಂತರಗೊಂಡು ಇಂದುಮಗ್ಗೆ ಹಾಗೂ ಮಳಲಿ–ಕಾಲೋನಿಗಳಾಗಿವೆ. ಇವರು ಚಿಕ್ಕ ವಯಸ್ಸಿನಲ್ಲಿಯೇ ಮೈಸೂರಿಗೆ ಬಂದು ನೆಲಸಿ ಪತ್ರಿಕೋದ್ಯಮ, ಸಾಹಿತ್ಯ, ಕಲೆ, ಸಮಾಜಸೇವೆ ಹಾಗೂ ರಾಜಕಾರಣಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮೈಸೂರಿನ ಮರಿಮಲ್ಲಪ್ಪ, ಸದ್ವಿದ್ಯಾ, ಶಾರದಾವಿಲಾಸ ಶಾಲೆಗಳ ಸ್ಥಾಪನೆಯಲ್ಲಿ ಇವರು ಪ್ರಧಾನ ಪಾತ್ರ ವಹಿಸಿದ್ದಾರೆ. ಅನಾಥಾಲಯ ಅವರ ದೂರದೃಷ್ಟಿಯ ಫಲ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಅವರು ಮಾಡಿದ ಕೆಲಸಗಳು ಸ್ಮರಣೀಯ. ೧೯೨೨ರಲ್ಲಿ ದಾವಣಗೆರೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು. ವಿವರ ಸ್ಮರಣಾರ್ಥ ಮೈಸೂರು ಲ್ಯಾನ್ಸ್ ಡೌನ್ ಬಿಲ್ಡಿಂಗ್ ಎದುರಿನಲ್ಲಿರುವ ಉದ್ಯಾನವನದಲ್ಲಿ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ. ಆರೋಪವಿಧಾನ ಪ್ರವೇಶಿಕೆ, ಹರಿಶ್ಚಂದ್ರವಚನ ಕಾವ್ಯ, ದೇಶಾಭಿಮಾನ, ಬಾಲಬೋಧ ದೌರ್ಜನ್ಯಕ್ರಮ, ಟೆಲಿ ಮಾಕಸ್ಸರಿನ ಸಾಹಿತ್ಯ ಚರಿತ್ರೆ, ಭೂಕರ್ ವಾಷಿಂಗ್‌ಟನ್ನಿನ ಚರಿತ್ರೆ, ವಿದ್ಯಾರ್ಥಿಭೂಷಣ ಮುಂತಾದವು ಇವರ ಅಮೂಲ್ಯ ಕೃತಿಗಳು.

**ಪ. ನಾಗರಾಜಯ್ಯ :** ತಾಲೂಕಿನ ಕಿತ್ತೂರಿನಲ್ಲಿ ೧೯೨೦ರಲ್ಲಿ ಜನಿಸಿದ ಇವರು ಹಿರಿಯ ವಿದ್ವಾಂಸರು. ಕನ್ನಡ ಪಂಡಿತ ಪರೀಕ್ಷೆ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ

ಎಂ.ಎ. ಪದವಿ ಪಡೆದ ಶ್ರೀಯುತರು ಕೆಲಕಾಲ ಮೈಸೂರು ಪುರಸಭೆ ಹಾಗೂ ಮೈಸೂರು ತಾಲೂಕು ಕಛೇರಿಯಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸಿದರು. ತಮ್ಮ ಮನೋಧರ್ಮಕ್ಕೆ ಒಗ್ಗದ ನೌಕರಿಯನ್ನು ಬಿಟ್ಟು ತಾಲೂಕಿನ ಅಂತರಸಂತೆಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯ ವೃತ್ತಿಯನ್ನು ೧೯೫೨ರಲ್ಲಿ ಆರಂಭಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಕನ್ನಡ ಜಾಣ, ಕನ್ನಡರತ್ನ ಪರೀಕ್ಷೆಗೆ ಕುಳಿತುಕೊಳ್ಳುವ ಹಲವಾರು ಯುವಕರಿಗೆ ಮಾರ್ಗದರ್ಶನ ನೀಡಿ, ಓದುವ ಅಭಿರುಚಿಯನ್ನು, ಕನ್ನಡ ಪುಸ್ತಕಗಳ, ಸಾಹಿತಿಗಳ ಪರಿಚಯವನ್ನೂ ಮಾಡಿಸಿದರು. ಹಾಸನ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಒಂದೂವರೆ ದಶಕದಷ್ಟು ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ಹಳಗನ್ನಡದಲ್ಲಿ ಅಪಾರ ಪಾಂಡಿತ್ಯ ಗಳಿಸಿಕೊಂಡಿರುವ ಇವರು ಭಾಸ್ಕರಕವಿಯ ಜೀವಂಧರ ಚರಿತೆ, ರನ್ನ ಕವಿಯ ಅಜಿತನಾಥ ಪುರಾಣ, ಜನ್ನನ ಅನಂತಪುರಾಣ ದೀಪಿಕೆ ಮೊದಲಾದವುದವಲ್ಲದೆ ಜೈನ ಧರ್ಮದ ಪ್ರಮುಖರನ್ನು ಕುರಿತ 'ಮರೆಯಲಾಗದ ಮಹನೀಯರು' ಎಂಬ ಮಾಲಿಕೆಯಲ್ಲಿ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಜೈನ ಸಾಹಿತ್ಯದಲ್ಲಿ ಶ್ರೇಷ್ಠ ಸೇವೆ ಸಲ್ಲಿಸಿರುವ ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತು ಚಾವುಂಡರಾಯ ಪ್ರಶಸ್ತಿ (೨೦೦೫)ಯನ್ನು ನೀಡಿ ಗೌರವಿಸಿದೆ.

**ವಿ.ಎಚ್. ಗೌಡ :** ತಾಲೂಕಿನ ಹೊಸಹೊಳಲಿನವರು. ಕಪಿಲಾ ನದಿಯ ಹಿನ್ನೀರಿನಿಂದ ಮುಳುಗಡೆಯಾಗಿದ್ದರಿಂದ ಆಲೂರಿನ ಜನರು ನಿಸನ ಹಾಗೂ ಕೊತ್ತನಹಳ್ಳಿ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಕೃಷಿಕ ಕುಟುಂಬದಿಂದ ಬಂದ ವಿ.ಎಚ್.ಗೌಡರು ೧೯೩೭ ರಲ್ಲಿ ಜನಿಸಿ, ಪ್ರಾಥಮಿಕ ಶಿಕ್ಷಣವನ್ನು ಹೊಸಹೊಳಲಿನಲ್ಲಿ ಮುಗಿಸಿ, ಮೈಸೂರಿನಲ್ಲಿ ಬಿ.ಎಲ್. ಪದವಿಯನ್ನು ಪಡೆದು ೧೯೬೩ರಿಂದ ಮೈಸೂರಿನಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದಾರೆ. ನ್ಯಾಯವಾದಿ, ಲೇಖಕ, ಕಾನೂನು ಪ್ರಾಧ್ಯಾಪಕ, ಪತ್ರಿಕೋದ್ಯಮಿ, ರಾಜಕೀಯ ಮುತ್ಸದ್ಧಿಯಾದ ಇವರು ನೇರ ನಡೆನುಡಿಯವರು. ಕಾನೂನುಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿರುವ ಇವರು ಮೈಸೂರು ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ೧೪ ವರ್ಷಗಳ ಕಾಲ ಭಾರತ ಸಂವಿಧಾನವನ್ನು ಸಮರ್ಥವಾಗಿ ಬೋಧಿಸಿದವರು. ವೈಚಾರಿಕ ಲೇಖನಗಳನ್ನೊಳಗೊಂಡ ಅವರ 'ಸಮನ್ವಯ' ಪಾಕ್ಷಿಕ, ನಂತರ ಮಾಸಿಕ ಪತ್ರಿಕೆಯಾಗಿ ಪತ್ರಿಕೋದ್ಯಮ ಕ್ಷೇತ್ರದಲ್ಲೊಂದು ದಾಖಲೆಯನ್ನು ಸ್ಥಾಪಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಹಾಗೂ ಸೆನೆಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ೧೯೭೨ ರಿಂದ ೧೯೮೭ರ ಅವಧಿಯಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಾಗೂ ೧೯೮೮ ರಿಂದ ೧೯೯೪ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದರು. ರಾಜಕಾರಣ ಒಗ್ಗದ್ದರಿಂದ ಅವಧಿಗೆ ಮೊದಲೆ ವಿಧಾನಪರಿಷತ್ತಿನ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದರು. ಸಮಕಾಲೀನ ಸಂವಹನ, ಸಮಕಾಲೀನ ಸಂವೇದನೆ, ಸಮಕಾಲೀನ ಸಂಪದ, ಸಮಕಾಲೀನ ಸಂವಹನ, ಮಹಿಳೆ ಮತ್ತು ಕಾನೂನು ಇವರ ಮಹತ್ವದ ಗ್ರಂಥಗಳು.

**ಶ್ರೀಕೃಷ್ಣ ಆಲನಹಳ್ಳಿ :** ತಾಲೂಕಿನ ಸಾಹಿತಿಗಳಲ್ಲಿ ಶ್ರೀಕೃಷ್ಣ ಆಲನಹಳ್ಳಿ ವಿಶೇಷ ಸ್ಥಾನ ಪಡೆದಿದ್ದಾರೆ. ತಾಲೂಕಿನ ಆಲನಹಳ್ಳಿಗೆ ಸಮೀಪವಿರುವ ಕೃಷ್ಣಯ್ಯನಹುಂಡಿ ಶ್ರೀಕೃಷ್ಣ ಆಲನಹಳ್ಳಿಯವರ ಜನ್ಮ ಸ್ಥಳವಾದರೂ ಅವರು ಬಾಲ್ಯದಲ್ಲಿ ಬೆಳೆದದ್ದೆಲ್ಲಾ ಆಲನಹಳ್ಳಿಯ ಅವರ ಸೋದರಮಾವನ ಮನೆಯಲ್ಲಿ. ಪ್ರತಿಭಾವಂತ ಬರಹಗಾರರಾದ ಇವರು, ವಿದ್ಯಾರ್ಥಿಯಾಗಿದ್ದಾಗಲೇ 'ಮಣ್ಣಿನಹಾಡು' ಕವನ ಸಂಕಲನದ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಹಾಗೂ ಭಾರತೀಯ ಭಾಷಾ ಸಂಸ್ಥಾನದಲ್ಲಿ ಕೆಲಕಾಲ ಸೇವೆಸಲ್ಲಿಸಿ, ಮಧ್ಯದಲ್ಲಿಯೇ ಕೆಲಸವನ್ನು ಬಿಟ್ಟರು. ಅವರ 'ಪರಸಂಗದ ಗೆಂಡೆತಿಮ್ಮ', 'ಕಾಡು', 'ಭುಜಂಗಯ್ಯನ ದಶಾವತಾರ'ಗಳು ಸಿನಿಮಾಗಳಾದರೆ, ಫೀನಿಕ್ಸ್ ಇನ್ನಿತರ ಕೃತಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ವಿಮರ್ಶಕರ ಗಮನ ಸೆಳೆದಿವೆ. ಆದರೆ ಶ್ರೀಕೃಷ್ಣಆಲನಹಳ್ಳಿಯವರು ಚಿಕ್ಕ ವಯಸ್ಸಿನಲ್ಲಿಯೇ ನಿಧನರಾದರು.

**ಸ.ಚ. ಮಹದೇವನಾಯಕ :** ಇವರು ತಾಲೂಕಿನ ಸರಗೂರಿನವರು. ಶಾಲಾ ಉಪಾಧ್ಯಾಯರಾಗಿ, ಕಿರಿಯ ಕಾಲೇಜು ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ೧೯೫೮ ರಿಂದಲೇ ಕ್ಷೇತ್ರಕಾರ್ಯ ಮಾಡಿ ಹಳ್ಳಿಯ ಹಾಡುಗಳು, ನಾನೆದ್ದು ನೆನೆದೇನು, ಜನಪದ ಕಥೆಗಳು, ಸಂಪಿಗೆ ಅರಳೀವೆ, ಜಾನಪದ ರಸಗಂಗೆ ಕೃತಿಗಳನ್ನು ಇವರು ಸಂಪಾದಿಸಿರುವರು. ಅದಕ್ಕಾಗಿ ಇವರಿಗೆ ೨೦೦೧-೦೨ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಬಂದಿದೆ. 'ಸರಗೂರು ಸಂಪಿಗೆ' ಇವರ ಕವನಸಂಕಲನ. 'ದಾಹ' ಮತ್ತು 'ಮುಕ್ತ' ಇವರ ಪ್ರಕಟಿತ ಕಾದಂಬರಿಗಳು.

**ಸಿದ್ದಶೆಟ್ಟಿ :** ಜನಪದ ಮಹಾಗಾಯಕ ಎಂದೇ ಪ್ರಸಿದ್ಧರಾದ ಸಿದ್ದಶೆಟ್ಟಿ ಹುಟ್ಟಿದ್ದು, ನಂಜನಗೂಡು ತಾಲೂಕಿನ ಹೊರಳಹಳ್ಳಿ. ಆದರೆ ಬೆಳೆದದ್ದು, ಈ ತಾಲೂಕಿನ ಬೆಟ್ಟದಬೀಡಿನಲ್ಲಿ. ಚಿಕ್ಕಂದಿನಿಂದಲೇ ತಂದೆ ಮತ್ತು ದೊಡ್ಡಪ್ಪಂದಿರಿಂದ ತತ್ವಪದ, ಪುರಾಣ, ಭಜನೆಗಳನ್ನು ಕಲಿತು, ಹಳ್ಳಿ ಹಳ್ಳಿಗೆ ಹೋಗಿ ಕಾರ್ಯಕ್ರಮ ನಡೆಸುತ್ತಿದ್ದರು. ತಮ್ಮ ಗಾಯನದಿಂದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮನೆ ಮಾತಾದರು. ಇವರ 'ಜನಪದ ಮಹಾಭಾರತ' ಎಂಬ ಮಹಾಕಾವ್ಯವನ್ನು ಪಿ.ಕೆ. ರಾಜಶೇಖರ್ ೨೦೦೪ರಲ್ಲಿ ಹೊನ್ನಾರು ಜನಪದಗಾಯಕರು ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ೧೯೯೯ರಲ್ಲಿ ಸಿದ್ದಶೆಟ್ಟರು ನಿಧನರಾದರು.

**ನೀ. ಗಿರಿಗೌಡ :** ತಾಲೂಕಿನ ಕಣಿಯನಹುಂಡಿ ಗ್ರಾಮದವರು. ಪಾಂಡವಪುರದ ವಿಜಯ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲರಾಗಿ ೨೦೦೨ರಲ್ಲಿ ನಿವೃತ್ತರಾಗಿದ್ದಾರೆ. ಕನ್ನಡ ವ್ಯಾಕರಣ ಪರಿಚಯ, ಕನ್ನಡ ಛಂದಸ್ಸಿನ ಪ್ರವೇಶಿಕೆ ಹಾಗೂ ಎರಡು ಜನಪದ ಕಾವ್ಯಗಳು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಗಿರಿಸಿರಿ' ಹಾಗೂ 'ಶತಮಾನದ ಬೆಳಕು' ಅವರ ಅಭಿನಂದನಾ ಗ್ರಂಥಗಳು, ೧೯೯೯ರಿಂದ ೨೦೦೪ರ ವರೆಗೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್, ಶಿಕ್ಷಣಾಮಂಡಲಿ, ಸಿಂಡಿಕೇಟ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ಕ್ಯಾತನಹಳ್ಳಿ ಬಸವರಾಜು :** ತಾಲೂಕಿನ ಕ್ಯಾತನಹಳ್ಳಿಯ ಎನ್. ಬಸವರಾಜು, ದಾರಿ, ನಿಗೂಢ, ಪುರಂದರದಾಸರು, ಕನಕದಾಸರು, ಮತ್ತಿತಾಳಯ್ಯನಹಳ್ಳಿಯ ಮಂದಿ, ಕನ್ನಡ ವ್ಯಾಕರಣ ಮೊದಲಾದ ಸುಮಾರು ೬೦ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಪ್ರೌಢಶಾಲಾ ಅಧ್ಯಾಪಕರಾಗಿದ್ದ ಇವರು ೧೯೯೨ ರಿಂದ ೧೯೯೫ರವರೆಗೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು.

**ಜಯಚಂದ್ರರಾಜ ಅರಸು :** ಇವರು ತಾಲೂಕಿನ ಕೋಳಗಾಲದವರು. ಉತ್ತಮ ಸಂಘಟಕರಾದ ಇವರು ಯಕ್ಷಗಾನ ಹಾಗೂ ರಂಗಭೂಮಿ ಕಲಾವಿದರು. ಕೋಳಗಾಲ ಘಟ್ಟದ ಕೋರೆ ಯಕ್ಷಗಾನ ಕಲೆಯ ಆದ್ಯ ಪ್ರವರ್ತಕರಾದ ಭಾಗವತ ಬಸವರಾಜೇ ಅರಸುರವರು ಅನೇಕ ಕಲಾವಿದರನ್ನು ಯಕ್ಷಗಾನ ಕ್ಷೇತ್ರಕ್ಕೆ ಪರಿಚಯ ಮಾಡಿಕೊಟ್ಟಿದ್ದು, ಜಯಚಂದ್ರರಾಜ ಅರಸು ಅವರು ಭಾಗವತ ಬಸವರಾಜ ಅರಸು ಅವರ ಮರಿ ಮೊಮ್ಮಗ.

**ರಂಗಭೂಮಿ :** ನಾಟಕ ಕ್ಷೇತ್ರಕ್ಕೆ ಈ ತಾಲೂಕು ವಿಶೇಷ ಕೊಡುಗೆಯನ್ನು ಕೊಟ್ಟಿದೆ. ಹಲವಾರು ರಂಗಭೂಮಿ ಕಲಾವಿದರು ಇಲ್ಲಿದ್ದಾರೆ. ಹೈರಿಗೆಯ ಜವರಶೆಟ್ಟಿ ಹೆಗ್ಗಡದೇವನ ಕೋಟೆ, ಹುಣಸೂರು, ಪಿರಿಯಾಪಟ್ಟಣ, ಅರಕಲಗೂಡು ತಾಲೂಕುಗಳಲ್ಲಿ ಸುಮಾರು ೧೨೦ ಪೌರಾಣಿಕನಾಟಕಗಳನ್ನು ಕಲಿಸಿ ಉತ್ತಮ ಕಲಾವಿದರನ್ನು ತಯಾರು ಮಾಡಿದ್ದಾರೆ. ಇವರಿಗೆ ರಾಜ್ಯ ಸರ್ಕಾರದ ಮಾಸಿಕ ೫೦೦ ರೂ. ಹಾಗೂ ಕೇಂದ್ರ ಸರ್ಕಾರ ವಾರ್ಷಿಕ ೧೮,೦೦೦ ರೂ. ಗೌರವಧನ ನೀಡುತ್ತಿವೆ. ಅದೇ ರೀತಿ ಸಾಗರೆಯ ಹಾರ್ಮೋನಿಯಂ ಕಲಾವಿದರಾದ ವೆಂಕಟಪ್ಪನವರಿಗೆ ರಾಜ್ಯ ಸರ್ಕಾರದಿಂದ ಮಾಸಿಕ ೫೦೦ ರೂ. ಕೇಂದ್ರ ಸರ್ಕಾರದಿಂದ ವಾರ್ಷಿಕ ೧೮,೦೦೦ ರೂ. ಗೌರವಧನ ನೀಡಲಾಗುತ್ತಿದೆ.

ರಂಗಭೂಮಿ ಕಲಾವಿದರಾದ ಮಟಕೆರೆಯ ರಾಮನಾಯಕ ಮತ್ತು ತಮ್ಮಯ್ಯ (ತತ್ವಪದ, ಸಾಲಿನ ಭಜನೆ) ಜಕ್ಕಹಳ್ಳಿಯ ಮಹದೇವಯ್ಯ. ತೋರವಳ್ಳಿಯ ರಂಗಶೆಟ್ಟಿ. ಮುದ್ದಶೆಟ್ಟಿ, ಚಿನ್ನಶೆಟ್ಟಿ, ಹೆಚ್.ಡಿ. ಕೋಟೆಯ ಪುಟ್ಟಾಚಾರ್, ಗೋಪಾಲಾಚಾರ್, ಸಿದ್ಧಾಚಾರ್, ಚಕ್ಕೂರಿನ ಅಂಕನಾಯಕ, ದೇವರಾಜು, ಕೆ.ಬೆಳತೂರಿನ ದೊಡ್ಡೇಗೌಡ, ಕೋಳಗಾಲದ ಶಿವಣ್ಣ, ಹೆಚ್.ಡಿ. ಕೋಟೆಯ ಪಿಟೀಲುವಾದಕ ಪುಟ್ಟರಾಮಯ್ಯ ಹೈರಿಗೆಯ ಹರಿಕಥಾ ವಿದ್ವಾನ್ ಹೆಚ್.ಕೆ. ಷಣ್ಮುಖದಾಸ್ ಹಾಗೂ ಕ್ಯಾತನಹಳ್ಳಿಯ ಹಾಲೇಗೌಡ ರಂಗಭೂಮಿಗೆ ತಮ್ಮ ಪ್ರತಿಭೆ ಹಾಗೂ ಅಭಿನಯದಿಂದ ವಿಶೇಷ ಕೊಡುಗೆ ನೀಡಿದ್ದಾರೆ. ಕೋಳಗಾಲದ ಕೆ.ಸಿ. ಸುರೇಶ್ ಚಲನಚಿತ್ರ ಸಂಕಲನಕಾರರಾಗಿ ಸಿನಿಮಾರಂಗದಲ್ಲಿ ಹೆಸರು ಮಾಡಿದ್ದಾರೆ.

**ಪತ್ರಿಕೋದ್ಯಮ :** ಪತ್ರಿಕೋದ್ಯಮಕ್ಕೆ ಈ ತಾಲೂಕು ತನ್ನದೇ ಆದ ಕೊಡುಗೆ ನೀಡಿದೆ. ಮಗ್ಗೆ ಗ್ರಾಮದ ಎಂ. ವೆಂಕಟಕೃಷ್ಣಯ್ಯ ಈ ತಾಲೂಕಿನ ಪ್ರಥಮ ಪತ್ರಕರ್ತರು. ಇವರ ನಂತರ ಹೆಚ್.ಸಿ. ಶೇಷಾದ್ರಿ ಪತ್ರಕರ್ತರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಸೇವೆ ಸಲ್ಲಿಸಿದ್ದಾರೆ. ೧೯೪೮ರಲ್ಲಿ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಪತ್ರಿಕೆಗೆ ವರದಿಗಾರರು

ಹಾಗೂ ಏಜೆಂಟರಾಗಿ ನೇಮಿಸಲ್ಪಟ್ಟಿದ್ದು, ೨೦೦೨ ಏಪ್ರಿಲ್‌ನಲ್ಲಿ ಏಜನ್ಸಿಯನ್ನು ಬಿಟ್ಟ ಶ್ರೀಯುತರು, ಡಿಸೆಂಬರ್ ೨೦೦೩ರಲ್ಲಿ ವರದಿಗಾರಿಕೆಯಿಂದಲೂ ನಿವೃತ್ತರಾಗಿದ್ದಾರೆ. ಇತ್ತೀಚೆಗೆ ಸಂಯುಕ್ತ ಕರ್ನಾಟಕದ ವರದಿಗಾರರಾಗಿ ನಂಜುಂಡಪ್ಪ ಹಾಗೂ ಮೈಸೂರು ಮಿತ್ರ ವರದಿಗಾರರಾಗಿ ಪುರುಷೋತ್ತಮ ಕೆಲಸ ಮಾಡುತ್ತಿದ್ದಾರೆ.

* * * *